ಕರ್ನಾಟಕ ಸರ್ಕಾರ

# ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆರೋಗ್ಯ ಸೌಧ, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023

ದೂರವಾಣಿ ಸಂ: 22536200, E-mail: ed.sast-hfw@karnataka.gov.in

ಸಂಖ್ಯೆ: ಆಕುಕ/ಎಸ್‌ಎಎಸ್‌ಟಿ/ಆಡಳಿತ/50/2024–25 ಪಿ–4 ದಿನಾಂಕ: 22–01–2026

ಇ–ಆಫೀಸ್ ಕಡತ ಸಂಖ್ಯೆ: 267047

## ಅಧಿಸೂಚನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಹಾಗೂ ಇತರೆ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ **ದಿನಾಂಕ:30–01–2026 ಮತ್ತು ದಿನಾಂಕ:31–01–2026 ರಂದು ಸಮಯ ಬೆಳಗ್ಗೆ 10.30** ಗಂಟೆಯಿಂದ ಆಸಕ್ತ ಅಭ್ಯರ್ಥಿಗಳಿಗೆ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ. ಅಭ್ಯರ್ಥಿಗಳನ್ನು ರೋಸ್ಟರ್ ಹಾಗೂ ಟ್ರಸ್ಟ್‌ನ ನಿಯಾಮವಳಿಗಳ ಪ್ರಕಾರ ಮೆರಿಟ್‌ನ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಗುತ್ತಿಗೆ ಅವಧಿಯನ್ನು ಒಂದು ವರ್ಷದ ಅವಧಿಗೆ ಸೀಮಿತಗೊಳಿಸಿದ್ದು, ಅಗತ್ಯಕ್ಕನುಗುಣವಾಗಿ ವಿಸ್ತರಿಸಬಹುದಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ ಸ್ವಯಂ ವಿವರ ಹಾಗೂ ಮೂಲ ದಾಖಲಾತಿಗಳೊಂದಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯಸೌಧ, 7ನೇ ಮಹಡಿ, ಬೆಂಗಳೂರು–560023 ಇಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ.

| S. No | Post Name | No. of Posts | Qualification | Experience | Salary per month (In Rs.) | Age Limit | Reservation | Others | Women | Rural | PH | Total |
|---|---|---|---|---|---|---|---|---|---|---|---|---|
| 1 | Project Manager - IT | 1 | BE (Computer Science and /Information Science will be preferred) | 10 years experience in IT field and 2 years experience on software development like dot NET and SQL server | 1,50,000 | Below 60 years | - | - | - | - | - | - |
| 2 | Doctors- In Office Quality cell (Work from Office) | 1 | MBBS with PG Degree/ Diploma | Minimum 1 year of experience in clinical/ Public Health with adequate computer knowledge. | 1,00,000 | Below 65 years | GM<br>Total | 1<br>1 | -<br>- | -<br>- | -<br>- | 1<br>1 |
| | | | MBBS | Minimum 2 years of experience in clinical/ Public Health with adequate computer knowledge. | | | | | | | | |
| 3 | Senior Executive Doctors (Work from Office) | 9 | MBBS with PG Degree/ Diploma | Minimum 1 year of experience in clinical/ Public Health with adequate computer knowledge. | *65,000 | Below 65 years | SC C-A<br>GM<br>ST<br>C-1<br>2A<br>SC C-B<br>2B<br>Total | 1<br>-<br>1<br>1<br>1<br>1<br>1<br>6 | -<br>2<br>-<br>-<br>-<br>-<br>-<br>2 | -<br>1<br>-<br>-<br>-<br>-<br>-<br>1 | -<br>-<br>-<br>-<br>-<br>-<br>-<br>- | 1<br>3<br>1<br>1<br>1<br>1<br>1<br>9 |
| | | | MBBS | Minimum 2 years of experience in clinical/ Public Health with adequate computer knowledge. | | | | | | | | |

| S. No | Post Name | No. of Posts | Qualification | Experience | Salary per month (In Rs.) | Age Limit | Reservation | Others | Women | Rural | PH | Total |
|---|---|---|---|---|---|---|---|---|---|---|---|---|
| 4 | Consultant (Training & Capacity Building) | 1 | Any post graduate Degree prference given to MBA(HRD) | Minimum 10 years experience in Governament organisation and the candidate should have an experience in conducting training programmes independently with adequate computer knowledge, preparation of training materials/modules. | 70000 | Below 60 years | - | - | - | - | - | - |
| 5 | Regional Consultant | 3 | MBBS | Minimum 3 years of experience in Medical Field with preference to candidates having field or similar experience with adequate computer knowledge. | #60,000 | Below 55 years | SC C-A | 1 | - | - | - | 1 |
| | | | | | | | GM | 1 | - | - | - | 1 |
| | | | | | | | ST | 1 | - | - | - | 1 |
| | | | | | | | Total | 3 | - | - | - | 3 |
| 6 | Assistant Regional consultant (Drs) | 6 | MBBS | 5 years experience in medical field, preference will be given to those who have minimum 2 years of field experience. | #50,000 | Below 55 years | SC C-A | 1 | - | - | - | 1 |
| | | | | | | | GM | 1 | 1 | 1 | - | 3 |
| | | | | | | | ST | 1 | - | - | - | 1 |
| | | | | | | | C-1 | 1 | - | - | - | 1 |
| | | | | | | | Total | 4 | 1 | 1 | - | 6 |
| | | | BDS with MPH | 6 years experience in medical field, preference will be given to those who have minimum 2 years of field experience. | #45,000 | | | | | | | |
| 7 | IEC Consultant | 1 | PG in Mass Communication/Journalism from a Recognized University. | Minimum 7 years' experience in Designing, Developing & execution of advocacy activities and Supervision and Monitoring of IEC Activities preference will be given to candidates who have worked in Govt. Sector. | *58,000 | Below 60 Years | - | - | - | - | - | - |
| 8 | Executive (Doctor)- 2A Claims | 3 | MBBS | Minimum 3 years of experience in medical field and should have qualities of team leader with adequate computer knowledge | *50000 | Below 65 Years | GM | - | - | 1 | - | 1 |
| | | | | | | | C-1 | 1 | - | - | - | 1 |
| | | | | | | | ST | 1 | - | - | - | 1 |
| | | | | | | | Total | 2 | - | 1 | - | 3 |
| | | | BDS | | *45000 | | | | | | | |
| 9 | Project Manager – KASS Scheme | 1 | MBBS with PG | Minimum 7 years of experience in medical field and should have qualities of team leader | 85,000 | Below 65 years | - | - | - | - | - | - |

| S. No | Post Name | No. of Posts | Qualification | Experience | Salary per month (In Rs.) | Age Limit | Reservation | Others | Women | Rural | PH | Total |
|---|---|---|---|---|---|---|---|---|---|---|---|---|
| | | | | with adequate computer knowledge. | | | | | | | | |
| 10 | Team Leader - Doctor (Claims) KASS Scheme | 1 | MBBS | Minimum 2 years of experience in clinical/Public Health with adequate computer knowledge. | 70,000 | Below 65 years | - | - | - | - | - | - |
| 11 | Portal Management and Technology Unit KASS Scheme | 2 | BE CS/IS/Electronics)/ MCA | Minimum 5 years experience in relevant field | 55,000 | Below 60 years | SC | 1 | - | - | - | 1 |
| | | | | | | | GM | 1 | - | - | - | 1 |
| | | | | | | | Total | 2 | - | - | - | 2 |
| | | | BCA/B.Sc/ Diploma in CS | Minimum 5 years experience in relevant field | | | | | | | | |

*ಕ್ರಮ ಸಂಖ್ಯೆ: 3,4,7,8, ಮತ್ತು 9ರ ಹುದ್ದೆಗಳಿಗೆ ಪ್ರತಿ ಮಾಹೆಗೆ ರೂ. 10,000/– ಗಳ ಪ್ರಯಾಣ ಭತ್ಯೆಯನ್ನು ಹಾಜರಾತಿಗನುಗುಣವಾಗಿ ನೀಡಲಾಗುತ್ತದೆ.

# ಕ್ರ.ಸಂ 5 ಮತ್ತು 6ರ ಹುದ್ದೆಗಳಿಗೆ ವಾಹನ ಸೌಲಭ್ಯವನ್ನು ಒದಗಿಸಲಾಗುವುದು.

**ಟಿಪ್ಪಣಿ:**

1. ಈ ಮೇಲಿನ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿ ಆಯ್ಕೆಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ/ ವರದಿ ಮಾಡಿಕೊಂಡು ಹುದ್ದೆಯಲ್ಲಿ ಮುಂದುವರೆಯದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು / ಸಂದರ್ಶನಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ.
2. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಡಿ ಈಗಾಗಲೇ ನೇಮಕಗೊಂಡು ಕರ್ತವ್ಯ ನಿರ್ವಹಿಸಿ, ತೃಪ್ತಿಕರ ಸೇವೆ ಸಲ್ಲಿಸದ ಕಾರಣ ಬಿಡುಗಡೆಗೊಂಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು / ಸಂದರ್ಶನಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ.
3. ಪ್ರಕಟಣೆಯಲ್ಲಿ ಆಯಾ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ಅನುಭವ, ಮೀಸಲಾತಿ ಹೊಂದಿಲ್ಲದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು / ಸಂದರ್ಶನಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ.

**1. ನೇಮಕಾತಿ:**

ಅಭ್ಯರ್ಥಿಯು ನೇರ ಸಂದರ್ಶನಕ್ಕೆ ಹಾಜರಾಗುವಾಗ ಅಭ್ಯರ್ಥಿಯ ವಿವರವನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿರುವ ನಿಗದಿತ ನಮೂನೆಯಲ್ಲಿ ಭರ್ತಿಮಾಡಿ, ಭಾವಚಿತ್ರವನ್ನು ಲಗತ್ತಿಸಿ ಈ ಕೆಳಗಿನ ಎಲ್ಲಾ ದಾಖಲಾತಿಗಳ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1. ಅಭ್ಯರ್ಥಿಯ ಸ್ವಯಂ ವಿವರ
2. ಎಸ್.ಎಸ್.ಎಲ್.ಸಿ ಅಂಕಪಟ್ಟಿ (ಸ್ವಯಂ ದೃಢೀಕರಿಸುವುದು)
3. ಪದವಿ ಮತ್ತು ಸ್ನಾತಕೋತ್ತರ ಪದವಿಯ ಎಲ್ಲಾ ಸೆಮಿಸ್ಟರ್ ಅಂಕಪಟ್ಟಿ (ಸ್ವಯಂ ದೃಢೀಕರಿಸುವುದು)
4. Karnataka Medical Council/Karnataka Dental Council ಪ್ರಮಾಣ ಪತ್ರ (ಸ್ವಯಂ ದೃಢೀಕರಿಸುವುದು)
5. ಅನುಭವ ಪ್ರಮಾಣ ಪತ್ರ (ಸಂಬಂಧಿಸಿದ ಸಂಸ್ಥೆಗಳಿಂದ ಪಡೆದು ಸ್ವಯಂ ದೃಢೀಕರಿಸುವುದು)
6. ಅಭ್ಯರ್ಥಿಯ ಗುರುತಿನ ಪ್ರಮಾಣ ಪತ್ರ (ಆಧಾರ ಕಾರ್ಡ್/ವೋಟರ್ ಐಡಿ/ಡ್ರೈವಿಂಗ್ ಲೈಸೆನ್ಸ್ ಇತ್ಯಾದಿ)
7. ಅಭ್ಯರ್ಥಿಗಳು 2 ಭಾವಚಿತ್ರ ಹಾಗೂ ಎಲ್ಲಾ ಮೂಲ ದಾಖಲಾತಿಗಳನ್ನು (Original Documents) ಪರಿಶೀಲನೆಗಾಗಿ ಸಲ್ಲಿಸುವುದು.
8. ಮೀಸಲಾತಿ ಸೌಲಭ್ಯ ಪಡೆಯಲು ಇಚ್ಛಿಸಿದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿರುವ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸುವುದು.
9. ಸಮತಳ ಮೀಸಲಾತಿಯಲ್ಲಿ ಅರ್ಹ ಅಭ್ಯರ್ಥಿ ಲಭ್ಯವಿಲ್ಲದ ಸಂದರ್ಭದಲ್ಲಿ ನಿಯಮಾನುಸಾರ ಅದೇ ವರ್ಗದ ಸಾಮಾನ್ಯ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದು.
10. ಹಾರ್ಡ್ ಕಾಪಿ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
11. ಅರ್ಜಿ ನಮೂನೆ ಹಾಗೂ ಹುದ್ದೆಗಳ ಹೆಚ್ಚಿನ ವಿವರಗಳಿಗಾಗಿ ಕಛೇರಿ ವೆಬ್‌ಸೈಟ್ http://arogya.karnataka.gov.in/sast ನಲ್ಲಿ ವೀಕ್ಷಿಸಬಹುದಾಗಿದೆ.

**2. ಷರತ್ತು ಮತ್ತು ನಿಬಂಧನೆಗಳು:**

1. ವೈದ್ಯರು/ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಪ್ರತಿ ವರ್ಷದ ಪರಿಶೀಲನೆಯ ಆಧಾರದ ಮೇಲೆ ಅಗತ್ಯತೆಯನ್ನು ಆಧರಿಸಿ, ಮುಂದಿನ 2 ವರ್ಷಗಳವರೆಗೆ ಮುಂದುವರೆಸಲಾಗುವುದು.
2. ಅಭ್ಯರ್ಥಿಗಳು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಕಡ್ಡಾಯವಾಗಿ ಅನುಭವ ಪ್ರಮಾಣಪತ್ರವನ್ನು ಸಲ್ಲಿಸುವುದು ಹಾಗೂ ಕರ್ತವ್ಯದಿಂದ ಈ ಹಿಂದೆ ಏಕೆ ಬಿಡುಗಡೆಗೊಳಿಸಲಾಗಿತ್ತು ಎಂಬ ಬಗ್ಗೆ ನಿರ್ದಿಷ್ಟ ವಿವರಗಳನ್ನು ನಮೂದಿಸತಕ್ಕದ್ದು.
3. ಎಲ್ಲಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಶೇಕಡವಾರು 50 ಅಥವಾ 50ಕ್ಕಿಂತ (50% and above) ಮೇಲ್ಪಟ್ಟ ಅಂಕಗಳು ಪಡೆದಿರುವ ಅರ್ಹ ಅಭ್ಯರ್ಥಿಗಳು ಮಾತ್ರ ಪರಿಗಣಿಸಲಾಗುವುದು.
4. ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಸೇವಾ ಅನುಭವವನ್ನು ಹೊಂದಿರತಕ್ಕದ್ದು.
5. ಹುದ್ದೆಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಮತ್ತು ಅನುಭವದ ದಾಖಲೆಗಳನ್ನು ಸಲ್ಲಿಸದ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
6. ಅಭ್ಯರ್ಥಿಗಳು ಕಡ್ಡಾಯವಾಗಿ ಕನ್ನಡ ಭಾಷೆಯ ಜ್ಞಾನವನ್ನು (ಓದಲು ಮತ್ತು ಬರೆಯಲು) ಹೊಂದಿರತಕ್ಕದ್ದು.
7. ಸಂದರ್ಶನದ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಕಂಪ್ಯೂಟರ್ (ಲಿಖಿತ/ಪ್ರಾಯೋಗಿಕ) ಪರೀಕ್ಷೆಯನ್ನು ನಡೆಸಲಾಗುವುದು.
8. ಸಂದರ್ಶನಕ್ಕೆ ಅಭ್ಯರ್ಥಿಯು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

**3. ಹಕ್ಕು ನಿರಾಕರಣೆ:**

1. ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಉದ್ಯೋಗದ ಹಕ್ಕನ್ನು ಪಡೆಯಲು ಅರ್ಹರಾಗುವುದಿಲ್ಲ.
2. ಈ ನೇರ ಸಂದರ್ಶನದ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ/ರದ್ದು ಪಡಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.
3. ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.
4. ಅಭ್ಯರ್ಥಿಗಳ ಪರವಾಗಿ ಅಥವಾ ಆಯ್ಕೆ/ನೇಮಕಾತಿಗೆ ಸಂಬಂಧಿಸಿದಂತೆ ರಾಜಕೀಯ ಅಥವಾ ಇತರ ಹೊರಗಿನ ಪ್ರಭಾವವನ್ನು ತರಲು ಯಾವುದೇ ಅವಕಾಶವಿರುವುದಿಲ್ಲ. ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ಸುಳ್ಳು ಅಥವಾ ತಪ್ಪಾದ ಮಾಹಿತಿಗಳನ್ನು ನೇಮಕಾತಿ ಉದ್ದೇಶಕ್ಕಾಗಿ ಬಳಸಿದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು ಹಾಗೂ ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.

ಮೇಲೆ ತಿಳಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಈ ಕೆಳಗೆ ತಿಳಿಸಿದ ಸ್ಥಳ ಮತ್ತು ದಿನಾಂಕದಂದು ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಲಾಗಿದೆ.

| | |
|---|---|
| **ಸಂದರ್ಶನದ ಸ್ಥಳ** | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023 |
| **ಸಂದರ್ಶನ ದಿನಾಂಕ** | **1.** Doctors- In Office Quality cell **2.** Senior Executive Doctors **3.** Regional Consultant **4.** Assistant Regional consultant (Drs), **5.** Executive (Doctor)- 2A Claims **6.** Project Manager –KASS Scheme **7.** Team Leader -Doctor (Claims) – **On 30-01-2026** |
| | **1.** Project Manager –IT **2.** Consultant (Training & Capacity Building) **3.** IEC Consultant **4.** Portal Management and Technology Unit, **On 31-01-2026** |
| **ನೋಂದಣಿ ಅವಧಿ** | ಬೆಳಿಗ್ಗೆ 10.30 ರಿಂದ 12.30 ಗಂಟೆಯೊಳಗೆ (12.30 ಗಂಟೆ ನಂತರ ನೋಂದಣಿಗೆ ಅವಕಾಶವಿರುವುದಿಲ್ಲ) |
| **ಕಂಪ್ಯೂಟರ್ ಪರೀಕ್ಷೆ** | ಬೆಳಿಗ್ಗೆ 10.45 ರಿಂದ 01.30 ಗಂಟೆಯೊಳಗೆ |
| **ಸಂದರ್ಶನದ ಅವಧಿ** | ಬೆಳಿಗ್ಗೆ 02.30 ರಿಂದ 05.30 ಗಂಟೆಯವರೆಗೆ |

22/1/26

**ಕಾರ್ಯಕಾರಿ ನಿರ್ದೇಶಕರು,**
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್,
ಬೆಂಗಳೂರು.